**-9-**

# ಕ್ರಿಮಿನಲ್ ಪ್ರಕರಣ ಸಂಖ್ಯೆ : 1809 /2023

**ಚಾಸಾ :- 01 / ಪ್ರಾಸಾ :- 01**

ದಿನಾಂಕಃ **26.07.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು** :- **ಶ್ರೀ. ಜೆ ಟಿ** ವಕೀಲರಿಂದ **ಆರೋಪಿಗಳ** ಪರವಾಗಿ :-

2 ಮತ್ತು 3 ನೇ ಆರೊಪಿಗಳು ವ್ಯವಸಾಯ ಮಾಡುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಹಾಲಿನ ಡೈರಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು 1 ನೇ ಆರೋಪಿಯೊಂದಿಗೆ ವಿವಾಹವಾಗಿ ಆರೋಪಿಗಳ ಮನೆಗೆ ಹೋದಾಗ ಆರೋಪಿಗಳ ಮನೆಯಲ್ಲಿ 1 ನೇ ಆರೋಪಿಯ ತಂಗಿ ಲತಾ ರವರು ಆರೋಪಿಗಳ ಮನೆಯಲ್ಲಿ ವಾಸ ಇದ್ದರು ಎಂದರೆ ಸಾಕ್ಷಿ ಹದು ಎಂದು ನುಡಿಯುತ್ತಾರೆ. ನಿನೀವು ವಿವಾಹವಾಗಿ ಆರೋಪಿಗಳ ಮನೆಗೆ ಹೋದ ನಂತರ ಸದರಿ ಲತಾ ರವರು ವಿವಾಹವಾಗಿ ಅವರ ಗಂಡನ ಮನೆಗೆ ಹೋಗಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನೀವು ವಿವಾಹವಾಗಿ ಆರೋಪಿಗಳ ಮನೆಗೆ ಹೋದಾಗ ಸರಿಯಾಗಿ ಅಡುಗೆ ಮಾಡದೆ ಆರೋಪಿಗಳೊಂದಿಗೆ ವಿನಾಃ ಕಾರಣ ಜಗಳ ಮಾಡುತಿತದ್ದಿರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿಗಳ ಮನೆ ರಸ್ತೆ ಬದಿಯ ಹತ್ತಿರವೆ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ವಿನಾಃ ಕಾರಣ ಜಗಳ ಮಾಡುತ್ತಿದ್ದಿರಿ ಹಾಗೂ ಮನೆಯ ಅಕ್ಕ ಪಕ್ಕದವರಿಗೆ

ಸದರಿ ಜಗಳ ಕೇಳಿಸುತ್ತಿತ್ತು ಅದರಿಂದ ಆರೋಪಿಗಳಿಗೆ ಅವಮಾನವಾಗುತ್ತಿತ್ತು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯತ್ತಾರೆ. 1 ನೇ ಆರೋಪಿಗೆ ನೀವು ಪ್ರತ್ಯೇಕ ಮನೆ ಮಾಡುವಂತೆ ಒತ್ತಾಯಿಸುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. 1 ನೇ ಆರೋಪಿಯ ತಂಗಿ ಲತಾ ರವರು ಕೆಎ ಎಸ್ ? ಅಧಿಕಾರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಲತಾ ರವರು ಬಾಣಂತನಕ್ಕೆ ಬಂದಾಗ ನೀವೆ ವಿನಾಃ ಕಾರಣ ಅವರೊಂದಿಗೆ ಜಗಳ ತೆಗೆಯುತ್ತಿದ್ದು ನೀವೆ ನಿಮ್ಮ ಮನೆಗೆ ಹೊಗಿರುತ್ತೀರಿ ಎಂದರೆ ಸಾಕ್ಷಿ 1 ನೇ ಆರೋಪಿಯೇ ನನ್ನನ್ನು ಮನೆಗೆ ಬಿಟ್ಟು ಬಂದಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ನಿಮ್ಮನ್ನು ಮನೆಗೆ ಬಿಟ್ಟು ಬಂದಿದ್ದಿರಲಿಲ್ಲ ನೀವಾಗಿ ನೀವು ನಿಮ್ಮ ಮನೆಗೆ ಹೋಗಿದ್ದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನೀವು ಆರೋಪಿಗಳ ಮನೆಯಲ್ಲಿ ಎಷ್ಟು ವರ್ಷ ಇದ್ದಿರಿ ಎಂದರೆ ಸಾಕ್ಷಿ 3 ವರ್ಷ ಎಂದು ನುಡಿಯುತ್ತಾರೆ. ಸದರಿ 3 ವರ್ಷದಲ್ಲಿ ಆರೋಪಿಗಳ ವಿರುದ್ದ ಯಾವುದೇ ಪೋಲಿಸ್ ದೂರನ್ನು ನೀವು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯತ್ತಾರೆ. ವಿಚ್ಛೇಧನ ನೋಟೀಸನ್ನು 2019 ರಲ್ಲಿ ಕಳುಹಿಸಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನೋಟೀಸ್ ಗೆ ನೀವು ಮರು ಉತ್ತರ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೋಟಿಸ್ ಕೊಟ್ಟ ನಂತರ ನೀವು ಯಾವ ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಇದೇ ದೂರನ್ನು ಕೊಟ್ಟಿದ್ದೆನುಎಂದು ನುಡಿಯುತ್ತಾರೆ. ಆರೋಪಿಗಳ ವಿರುದ್ದ ಶಿಶುಸಂರಕ್ಷಣ ಅಧಿಕಾರಿಗಳ ಮುಂದೆ ದೂರನ್ನು ಕೊಟ್ಟಿದ್ದಿರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಸದರಿ ದೂರಿನ ಧೃಡೀಕೃತ ನಕಲನ್ನು ತೋರಿಸಲಾಗಿ ನೋಡಿ

ಗುರುತಿಸಿದ್ದು ಸದರಿ ದೂರನ್ನು ನಿಡಿ- 1 ಎಂದು ಗುರುತಿಸಲಾಯಿತು.

ಸದರಿ ದೂರನ್ನು ನೀವು ಆರೋಪಿಗಳ ವಿರುದ್ದ ಹಾಗೂ 1 ನೇ ಆರೋಪಿಯ ತಂಗಿ ಲತಾ ಮತ್ತು ಅವರ ಗಂಡ ಮಂಜುನಾಥ್ ರವರ ವಿರುದ್ದ ಕೊಟ್ಟಿದ್ದಿರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದೂರಿನಲ್ಲಿ ಯಾವುದೇ ಉರುಳು ಇರುವುದಿಲ್ಲವೆಂದು ಅಧಿಕಾರಿಗಳು ಸದರಿ ದೂರಿನ ಮೇಲೆ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಹಾಗೂ ನೀವು ಯಾವುದೇ ನ್ಯಾಯಾಲಯಕ್ಕೆ ಹೋಗಿರುವುದಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಹೋಗಿದ್ದೆನು ಎಂದು ನುಡಿಯುತ್ತಾರೆ. ಯಾವ ನ್ಯಾಯಾಲಯಕ್ಕೆ ಹೋಗಿದ್ದಿರಿ ಹಾಗೂ ಯಾವ ಕೇಸನ್ನು ಹಾಕಿದ್ದಿರಿ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಹೋಗಿರಲಿಲ್ಲ ರಾಜಿ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಯಾವುದೇ ರಾಜಿ ಮಾಡಿಕೊಂಡು ಆರೋಪಿಗಳ ಮನೆಗೆ ಹೋಗಿದ್ದಿರಲಿಲ್ಲ ಎಂದರೆ ಸಾಕ್ಷಿ ರಾಜಿ ಮಾಡಿಕೊಂಡು ಆರೋಪಿಗಳ ಮನೆಗೆ ಹೊಗೇಗಿದ್ದೆನು ಎಂದು ನುಡಿಯುತ್ತಾರೆ. ನಿಡಿ-1 ರ ದೂರಿನಲ್ಲಿ ಈ ಪ್ರಕರಣದಲ್ಲಿ ಹೇಳಿದಂತೆ ಆರೂಪಿಗಳು ರೂ. 5 ಲಕ್ಷ ವರದಕ್ಷಿಣೆ ಹಣವನ್ನು ಕೇಳಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೇಳಿದ್ದೆನು ಆದರೆ ಮಹಿಳಾ ಅಭಿವೃದ್ಧಿ ಅಧಿಕಾರಿ ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ.

ಸದರಿ ನಿಡಿ-1 ರಂತೆ ನೀವು ದೂರನ್ನು ಕೊಟ್ಟ ನಂತರ 1 ನೇ ಆರೋಪಿಯು ವಿಚ್ಛೇಧನಕ್ಕಾಗಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ , ರಾಮನಗರದಲ್ಲಿ ಎಂ ಸಿ ನಂ.30/2020 ರಂತೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಅರ್ಜಿಯನ್ನು 1 ನೇ ಆರೋಪಿಯು ನೀವು ವಿನಾಃ ಕಾರಣ ಬಿಟ್ಟು ಹೋಗಿರುತ್ತೀರಿ ಹಾಗೂ ತೊಂದರೆ ಕೊಟ್ಟಿರುತ್ತೀರಿ ಎಂದು ಹೇಳಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ಇಲ್ಲ

ಎಂದು ನುಡಿಯುತ್ತಾರೆ. ಸದರಿ ದಾವೆದಲ್ಲಿ ನೀವು ಹಾಜರಾಗಿ ತಕರಾರನ್ನು ಸಲ್ಲಿಸಿದ್ದಿರಿ ಎಂದರೆ ಸಾಕ್ಷಿ ಹೌದುಎಂದು ನುಡಿಯುತ್ತಾರೆ. ಸದರಿ ತಕರಾರನ್ನು ಸಲ್ಲಿಸುವಾಗ ನೀವು 1 ನೇ ಆರೋಪಿಯೊಂದಿಗೆ ವಾಸ ಇದ್ದಿರಲ್ಲಿ ಎಂದರೆ ಸಾಕ್ಷಿ ಹೌದು ಎಂದುನುಡಿಯುತ್ತಾರೆ. ನಿಮ್ಮ ತಕರಾರಿನಲ್ಲಿ ಆರೋಪಿಗಳು ರೂ. 5 ಲಕ್ಷ ವರದಕ್ಷಿಣೆ ತರುವಂತೆ ಪೀಡಿಸಿದ್ದರುಎಂದು ಹಾಗೂ ಜ್ಯುವೆಲರಿ ತರುವಂತೆ ಪೀಡಿಸುತ್ತಿದ್ದರುಎ ಂದು ಹೇಳಿ ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ತಕರಾರಿನ ಪ್ರತಿಯನ್ನು ನೋಡಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನೀ ವು ನಿಮ್ಮ ತಕರಾರಿನಲ್ಲಿ ಎಲ್ಲಿಯೂ ಸದರಿ ವಿಷಯದ ಬಗ್ಗೆ ಹೆಳಿರುವುದಿಲ್ಲ ಇದು ಒಂದು ಸುಳ್ಳು ದೂರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಎಂ.ಸಿ ನಂ.30/2020 ರ ಧೃಡೀಕೃತ ನಕಲಿನ ಆದೇಶದ ಪ್ರತಿಗಳನ್ನು. ಅರ್ಜಿ ಮತ್ತು ಸಾಕ್ಷಿ ಸದರಿ ಅರ್ಜಿಯಲ್ಲಿ ಸಲ್ಲಿಸಿರುವ ತಕರಾರನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ**-2 , ನಿಡಿ-3 ಮತ್ತು ನಿಡಿ-4 ಎಂದು** ಗುರುತಿಸಲಾಯಿತು.

ದಿನಾಂಕ 26.04.2021 ರಂದು ಮಾಗಡಿ ಪೋಲಿಸ್ ಠಾಣೆಯಲ್ಲಿ ನೀವು ದೂರನ್ನು ಕೊಟ್ಟಿರುತ್ತೀರಿ ಮತ್ತು ಆರೋಪಿಗಳೂ ಸಹ ದೂರನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಹೌದು ಆದರೆ ನಾನು ಮೊದಲು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದೂರಿನಲ್ಲಿ ನೀವು ಹೇಳಿಕೆಯನ್ನೂ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಸದರಿ ದೂರಿನ ಧೃಡೀಕೃತ ನಕಲನ್ನು , ಸ್ವೀಕೃತಿಯನ್ನು, ಹೇಳಿಕೆಯನ್ನು ಮತ್ತು ಹಿಂಬರಹವನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ **ನಿಡಿ-5, ನಿಡಿ-6, ನಿಡಿ-7, ನಿಡಿ-8** ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ತಾನು ನೀಡಿದ ದೂರು ಮತ್ತು ಹೇಳಿಕೆಯ ಧೃಡೀಕೃತ ನಕಲನ್ನು ತೋರಿಸಲಾಗಿ

ನೋಡಿ ಗುರುತಿಸಿದ್ದು ಸದರಿ ದೂರು ಮತ್ತು ಹೇಳಿಕೆಯನ್ನು ಕ್ರಮವಾಗಿ **ನಿಡಿ-09 ಮತ್ತು ನಿಡಿ-10** ಎಂದು ಗುರುತಿಸಲಾಯಿತು. ಸದರಿ ದೂರನ್ನು ಕೊಡುವಾಗಲೂ ನೀವು ಆರೋಪಿಗಳ ಮನೆಯಲ್ಲಿ ವಾಸ ಇದ್ದಿರಲಿಲ್ಲ ಎಂದರೆ ಸಾಕ್ಷಿ ನಾನು ಬಾಣಂತನಕ್ಕೆ ಹೋಗಿದ್ದೆನು ಎಂದು ನುಡಿಯುತ್ತಾರೆ. ಸದರಿ ದೂರಿನಲ್ಲಿ ಸಹ ನೀವು ಆರೋಪಿಗಳು ರೂ. 5 ಲಕ್ಷ ವರದಕ್ಷಿಣೆ ಹಣಕ್ಕೆ ಡಿಮ್ಯಾಂಡ್ ಮಾಡಿದ್ದರು ಮತ್ತು ಜ್ಯೂವೆಲ್ಲರಿಗಳಿಗೆ ಡಿಮ್ಯಾಂಡ್ ಮಾಡಿದ್ದರು ಎಂದು ಬರೆಸಿರುವುದಿಲ್ಲ ಎಂದರೆ ಸಾಕ್ಷಿ ಹೌದು ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಡಿ-5 ರಂತೆ ನೀವು ದೂರನ್ನು ಕೊಟ್ಟಾಗ ವಿಚ್ಛೇಧನ ಪ್ರಕರಣ ನಡೆಯುತ್ತಿತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನಿಮ್ಮ ಅಣ್ಣ ಶ್ರೀನಿವಾಸ್ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ಕೇಸಿನಲ್ಲಿ ನಿಮ್ಮ ಅಣ್ಣನವರು ಸಾಕ್ಷಿದಾರರಾಗಿ ಇದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಸಲ್ಲಿಸಿದಂತಹ ವಿಚ್ಛೇಧನ ಅರ್ಜಿಯನ್ನು ವಾಪಸ್ಸು ಪಡೆಯಿರಿ ಎಂದು ಹೇಳಿ ಹಲ್ಲೆ ಮಾಡಿರುತ್ತಾರೆ ಎಂದು 1 ನೇ ಆರೋಪಿಯು ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದೂರು ಅಲ್ಲದೆ ನೀವು ಡಿವೈಎಸ್ ?ಪಿ ಕಛೇರಿಯಲ್ಲಿ ದೂರನ್ನು ಕೊಟ್ಟಿದ್ದಿರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಸದರಿ ದೂರಿನ ಧೃಡೀಕೃತ ನಕಲನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ದೂರನ್ನು **ನಿಡಿ-11 ಎಂದು** ಗುರುತಿಸಲಾಯಿತು. ಸದರಿ ದೂರನ್ನು ಸಹ ನೀವು ವಿಚ್ಛೇಧನ ಪ್ರಕರಣ ಸಲ್ಲಿಸಿದ ನಂತರ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದೂರನ್ನು ನೀಡುವ ಸಮಯದಲ್ಲೂ ನೀವೂ ಆರೋಪಿಗಳೊಂದಿಗೆ ವಾಸ ಇದ್ದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಿಡಿ-9 ರ

ದೂರಿನಲ್ಲಿ ರೂ. 15 ಲಕ್ಷ ವರದಕ್ಷಿಣೆ ಹಣ ತರುವಂತೆ ಹೇಳಿದ್ದರು ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗಳು ನಿಮ್ಮ ಸಂಪರ್ಕದಲ್ಲೆ ಇದ್ದಿರಲಿಲ್ಲ ಒಂದು ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಮತ್ತು ನಿಮ್ಮ ಅಣ್ಣ 1 ನೇ ಆರೋಪಿಯ ತಂಗಿ ಕೆಎಎಸ್ ಅಧಿಕಾರಿ ಆದ್ದರಿಂದ ಹಣವನ್ನು ಲಪಟಾಯಿಸುವ ಸಲುವಾಗಿ ಈ ರೀತಿ ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ದೂರಿನಲ್ಲಿ ಹೇಳಿರುವಂತೆ 1 ನೇ ಆರೋಪಿಯು ಬೆಳಗುಂಬದ ವೇದಾವತಿ ಎಂಬುವವರೊಂದಿಗೆ ಮದುವೆ ನಿಶ್ಚಯ ಆಗಿರುತ್ತದೆ ಮದುವೆ ಮಾಡಿಕೊಳ್ಳುತ್ತಾರೆ ಎಂದು ಹೇಳಿರುವುದು ಕಟ್ಟುಕಥೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ವೇದಾವತಿಯವರು ನಿಮ್ಮ ಹಾಗೂ ಆರೋಪಿಗಳ ಕುಟುಂಬದ ಸ್ನೇಹಿತರಿದ್ದು ನೀವು ಎಲ್ಲರೊಂದಿಗೆ ಸಂಬಂಧ ಕಲ್ಪಿಸುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಸುಳ್ಳು ದೂರನ್ನು ಸಲ್ಲಿಸಿದ್ದು ಆರೋಪಿಗಳ ವಿರುದ್ದ ಕ್ರಿಮಿನಲ್ ಪ್ರಕಣವನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**